# ‘ಭಾರ್ಗವನ ಸಮಾಜಸೇವೆ!



‘ಕಡಲ ತೀರದ ಭಾರ್ಗವ’ ಎಂದಾಕ್ಷಣ ಕಣ್ಣೆದುರಿಗೆ ಹಿರಿಯ ಸಾಹಿತಿ ಶಿವರಾಮ ಕಾರಂತರ ಚಿತ್ರ ಕಣ್ಣೆದುರಿಗೆ ಬರುತ್ತದೆ. ಗಾಂಧಿನಗರದಲ್ಲೀಗ ಈ ಹೆಸರಿನ ಚಿತ್ರವೊಂದು ತಯಾರಾಗುತ್ತಿದೆ. ಹಾಗೆಂದು ಇದು ಶಿವರಾಮ ಕಾರಂತರ ಜೀವನದ ಕಥೆಯಲ್ಲ. ಅವರಿಗೂ ಈ ಚಿತ್ರಕ್ಕೂ ಹೆಸರಿನ ಹೊಂದಿಕೆಯೊಂದನ್ನು ಬಿಟ್ಟರೆ ಯಾವ ಸಂಬಂಧವೂ ಇಲ್ಲ.

ವರುಣ್ ರಾಜು ಮತ್ತು ಭರತ್ ಗೌಡ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಪನ್ನಗ ಸೋಮಶೇಖರ್ ಕಥೆ ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈಗಾಗಲೇ ಚಿತ್ರದ ಚಿತ್ರೀಕರಣ ಮುಗಿದಿದ್ದು, ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸಗಳು ನಡೆಯುತ್ತಿವೆ. ಬೆಂಗಳೂರು, ಕುಂದಾಪುರ, ಭಟ್ಕಳ, ಕುಮಟಾ, ಮುರುಡೇಶ್ವರ ಸೇರಿದಂತೆ 63 ದಿನಗಳ ಚಿತ್ರೀಕರಣವನ್ನು ಮಾಡಿದ್ದಾರೆ.

ಪೋಸ್ಟ್ ಪ್ರೊಡಕ್ಷನ್ ಹಂತದ ಕೆಲಸ ನಡೆಯುತ್ತಿರುವಾಗಲೇ ಚಿತ್ರದ ಪ್ರಚಾರ ಕಾರ್ಯವನ್ನೂ ಆರಂಭಿಸಿರುವ ಚಿತ್ರತಂಡ ಈ ಉದ್ದೇಶದಿಂದ ಸಮಾಜ ಉಪಕಾರಿ ಹೆಜ್ಜೆ ಇಟ್ಟಿದೆ. ಅದರ ಭಾಗವಾಗಿಯೇ ಇತ್ತೀಚೆಗೆ ಬೆಂಗಳೂರಿನ ಜೆ.ಪಿ. ನಗರದ ಸಮೀಪ ಒಂದು ಪ್ರೌಢಶಾಲೆ ಮೈದಾನದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಚಿತ್ರಕ್ಕೆ ಅನಿಲ್ ಸಿ. ಜೆ. ಸಂಗೀತ ನಿರ್ದೇಶನ, ಕೀರ್ತನ್ ಪೂಜಾರ್ ಛಾಯಾಗ್ರಹಣ ಹಾಗೂ ಆಶಿಕ್ ಕುಸುಗೊಳ್ಳಿ, ಉಮೇಶ್ ಭೋಸಗಿ ಅವರ ಸಂಕಲನವಿದೆ. ಪಟೇಲ್ ವರುಣ್ ರಾಜು, ಭರತ್ ಗೌಡ, ಶೃತಿ ಪ್ರಕಾಶ್, ಕೆ.ಎಸ್.ಶ್ರೀಧರ್, ರಾಘವ್ ನಾಗ್ ಮುಂತಾದವರು ಈ ಚಿತ್ರದ ತಾರಾಬಳಗದಲ್ಲಿದ್ದಾರೆ

ಅಂದಹಾಗೆ ಈ ಚಿತ್ರದ ನಾಯಕ ಪಾತ್ರದ ಹೆಸರೂ ಭಾರ್ಗವ. ಹಾಗಾಗಿ ಚಿತ್ರಕ್ಕೆ ಕಡಲತೀರದ ಭಾರ್ಗವ ಎಂದು ಶೀರ್ಷಿಕೆ ಇಡಲಾಗಿದೆ ಎಂಬುದು ಚಿತ್ರತಂಡದ ಸಮಜಾಯಿಷಿ.

ಚಿತ್ರ: ಅಭಿಷೇಕ್ ಎಸ್.ಎಸ್.



## ಕಸ್ತೂರ್ ಬಾ ಪಾತ್ರದಲ್ಲಿ ಹರಿಪ್ರಿಯಾ

ಜಗತ್ತೇ ಅಚ್ಚರಿಯಿಂದ ನೋಡುವ ಮೇರುವ್ಯಕ್ತಿ ಮಹಾತ್ಮ ಗಾಂಧಿ. ಅವರ ಪ್ರಭೆಯಲ್ಲಿದ್ದೂ ತನ್ನತನ ಉಳಿಸಿಕೊಂಡಿರುವ ಸತ್ವಶಾಲಿ ವ್ಯಕ್ತಿತ್ವ ಅವರ ಪತ್ನಿ ಕಸ್ತೂರ್ ಬಾ ಅವರದ್ದು. ಗಾಂಧೀಜಿಯ ಕುರಿತು ಹಲವು ಸಿನಿಮಾಗಳು ಬಂದಿವೆ. ಆದರೆ ಕಸ್ತೂರ್ ಬಾ ಸಿನಿಮಾ ಜಗತ್ತಿನ ಲೈಮ್‌ಲೈಟ್‌ಗೆ ಇನ್ನೂ ಬಿದ್ದಂತಿಲ್ಲ. ಈ ಕೊರತೆಯನ್ನು ನೀಗಿಸುವ ರೀತಿಯಲ್ಲಿ ಕನ್ನಡದಲ್ಲಿ ಕಸ್ತೂರ್ ಬಾ ಅವರ ಬದುಕನ್ನು ಆಧರಿಸಿದ ಸಿನಿಮಾವೊಂದು ಸೆಟ್ಟೇರುತ್ತಿದೆ.

ಈ ಮಹತ್ವದ ಪ್ರಯತ್ನಕ್ಕೂ ‘ಸುಧಾ’ ವಾರಪತ್ರಿಕೆಗೂ ಒಂದು ಸಂಬಂಧವಿದೆ. ಲೇಖಕ ಬರಗೂರು ರಾಮಚಂದ್ರಪ್ಪ ಅವರು ಬರೆದಿರುವ ‘ಕಸ್ತೂರ್ ಬಾ ವರ್ಸಸ್ ಗಾಂಧಿ’ ‘ಸುಧಾ’ದಲ್ಲಿ ಧಾರಾವಾಹಿಯಾಗಿ ಪ್ರಸಾರವಾಗಿತ್ತು. ಅದೇ ಧಾರಾವಾಹಿಯನ್ನು ಆಧರಿಸಿ ಈಗ ಬರಗೂರು ರಾಮಚಂದ್ರಪ್ಪ ಸಿನಿಮಾ ಮಾಡುತ್ತಿದ್ದಾರೆ.

ಈ ಸಿನಿಮಾದಲ್ಲಿ ಹರಿಪ್ರಿಯಾ ಕಸ್ತೂರ್ ಬಾ ಪಾತ್ರದಲ್ಲಿ ನಟಿಸುತ್ತಿದ್ದು, ಕಿಶೋರ್ ಗಾಂಧಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ.

‘ಇದು ಬರೀ ಕಸ್ತೂರ್ ಬಾ ಅವರ ಜೀವನದ ದಾಖಲೆಯಷ್ಟೇ ಅಲ್ಲ, ಗಾಂಧೀಜಿಯವರ ಆದರ್ಶವಾದಿ ನಿಲುವು ಮತ್ತು ಹೋರಾಟಗಳ ಹಾದಿಯಲ್ಲಿ ಕಸ್ತೂರ್ ಬಾ ಅವರು ಎದುರಾಗುವ ಮತ್ತು ಒಂದಾಗುವ ವಿಶಿಷ್ಟ ನಿರೂಪಣೆಯಿಂದ ಕಟ್ಟುವ ಕಥನ. ನಿರ್ದಿಷ್ಟ ನಿಲುವುಗಳ ಮುಖಾಮುಖಿ ಮತ್ತು ಅನುಸಂಧಾನದ ತಾತ್ವಿಕ ನೆಲೆಯನ್ನು ಒಳಗೊಂಡಿರುತ್ತದೆ’ ಎನ್ನುವುದು ಬರಗೂರು ಅವರ ಮಾತು.

ಡಾ. ಅಂಬೇಡ್ಕರ್ ಪಾತ್ರದಲ್ಲಿ ಚಿತ್ರರಂಗದ ಹಿರಿಯ ಕಲಾವಿದರೊಬ್ಬರು ಅಭಿನಯಿಸುವ ಸಾಧ್ಯತೆ ಇದೆ.

ಗುಜರಾತ್ ಸಬರಮತಿ ಆಶ್ರಮ, ಮಹಾರಾಷ್ಟ್ರದ ವಾರ್ಧಾ ಆಶ್ರಮ ಮತ್ತು ಪೂನಾದ ಆಗಾಖಾನ್ ಬಂಗಲೆಗಳಲ್ಲಿ ಚಿತ್ರೀಕರಣ ಮಾಡುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ‘ಜನಮಿತ್ರ ಮೂವೀಸ್’ನ ಗೀತಾ ಅವರು ಈ ಚಿತ್ರಕ್ಕೆ ಹಣ ಹೂಡಿದ್ದಾರೆ.